

# ಸುಕುಮಾರ್–ಶಾರುಕ್ ಕಥನ ಕುತೂಹಲ

ಶಾರುಕ್ ಖಾನ್ 'ಕಿಂಗ್' ಚಿತ್ರದ ಕೆಲಸಗಳಲ್ಲಿ ತೊಡಗಿದ್ದಾರೆ. ಇನ್ನೊಂದು ಕಡೆ, 'ಪಠಾಣ್' ಚಿತ್ರದ ಎರಡನೇ ಭಾಗದ ತಯಾರಿಯೂ ನಡೆದಿದೆ. ಅವರು ಇನ್ನೂ ಎರಡು ವರ್ಷ ಬೇರೆ ಯಾವ ಸಿನಿಮಾ ಕೂಡ ಮಾಡಲು ಆಗದು ಎನ್ನುವುದು ಇದರಿಂದ ಸ್ಪಷ್ಟ. ಆದರೂ ಅವರ ದೂರದೃಷ್ಟಿ ಹೇಗಿದೆ ಎನ್ನುವುದಕ್ಕೆ, ತೆಲುಗು ನಿರ್ದೇಶಕ ಸುಕುಮಾರ್ ಜೊತೆಗೆ ಅವರು ನಡೆಸಿರುವ ಸಂವಾದವೇ ಸಾಕ್ಷಿ. 'ಪುಷ್ಪ' ಸರಣಿಯ ಎರಡು ದೊಡ್ಡ ಹಿಟ್ ಚಿತ್ರಗಳನ್ನು ನಿರ್ದೇಶಿಸಿದ ಸುಕುಮಾರ್ ಮೂರನೇ ಭಾಗದ ಕೆಲಸವನ್ನೂ ಶುರುಹಚ್ಚಿಕೊಳ್ಳಲಿದ್ದಾರೆ. ಅದರ ನಡುವೆ 'ಆರ್ ಸಿ 17' ಚಿತ್ರವನ್ನು ನಟ ರಾಮ್ ಚರಣ್ ಅವರಿಗಾಗಿ ನಿರ್ದೇಶಿಸುತ್ತಿದ್ದಾರೆ. ಆ ಕೆಲಸಗಳೆಲ್ಲ ಮುಗಿಯುವವರೆಗೆ ಅವರಿಗೂ ಪುರುಸೊತ್ತಿಲ್ಲ. ಹೀಗಿದ್ದರೂ ಅವರು ಶಾರುಕ್ ಜೊತೆಗೆ ಮುಂದೆ ಮಾಡಲಿರುವ ಸಿನಿಮಾ ಬಗ್ಗೆ ಚರ್ಚೆ ನಡೆಸಿದ್ದಾರೆ.

ಶಾರುಕ್ ಖಾನ್ ವೃತ್ತಿಬದುಕಿಗೆ 'ಬಾಜಿಗರ್' ಹಾಗೂ 'ಡರ್' ಚಿತ್ರಗಳು ತಿರುವು ನೀಡಿದ್ದವು. ಅವುಗಳಲ್ಲಿ ಪ್ರತಿನಾಯಕನಾಗಿ ಅವರು ಜನಮನ ಗೆದ್ದಿದ್ದರು. ಸುಕುಮಾರ್ ಅವರೂ 'ಪುಷ್ಪ' ಸರಣಿಯಲ್ಲಿ ಪ್ರತಿನಾಯಕನನ್ನೇ ಕೇಂದ್ರ ಪಾತ್ರ ಆಗಿಸಿದ್ದಾರೆ. ಶಾರುಕ್ ಕೂಡ ಹಳ್ಳಿಗಾಡಿನ ಒರಟು ವ್ಯಕ್ತಿತ್ವದ ಪಾತ್ರದಲ್ಲಿ ಅಭಿನಯಿಸಲು ಉತ್ಸುಕರಾಗಿದ್ದಾರೆ. ಈ ಕಾರಣಕ್ಕೇ ಇಬ್ಬರ ನಡುವೆ ಮಾತುಕತೆ ನಡೆದಿದೆ ಎಂದು ಕೆಲವು ಮಾಧ್ಯಮ ವರದಿ ಮಾಡಿವೆ.

ಜಾತೀಯ ತರತಮದ ವಿರುದ್ಧ ಬಂಡೇಳುವ, ಪಕ್ಕಾ ಹಳ್ಳಿ ಹೈದನಾಗಿ ಶಾರುಕ್ ಅವರನ್ನು ತೆರೆಮೇಲೆ ತರುವ ಇರಾದೆಯನ್ನು ಸುಕುಮಾರ್ ಕೂಡ ವ್ಯಕ್ತಪಡಿಸಿದ್ದು, ಅವರು ಸ್ಕ್ರಿಪ್ಟ್ ಬರೆಯಬೇಕಿದೆ. ನಂತರವಷ್ಟೇ ಚಿತ್ರದ ಚೌಕಟ್ಟು ಹೇಗೆ ಇದ್ದೀತು ಎಂದು ಅಂದಾಜು ಸಿಗಬಹುದು.

ಶಾರುಕ್ ಪ್ರಯೋಗಶೀಲ ಜನಪ್ರಿಯ ನಟ. ಮಣಿರತ್ನಂ ನಿರ್ದೇಶನಕ್ಕೆ ಒಡ್ಡಿಕೊಂಡಿದ್ದ ಅವರು, ತಮಿಳಿನ ಯುವ ನಿರ್ದೇಶಕ ಅಟ್ಲಿ ಅವರ ಸಾಮರ್ಥ್ಯ ನೆಚ್ಚಿಕೊಂಡು 'ಜವಾನ್' ಸಿನಿಮಾದಲ್ಲಿ ಅಭಿನಯಿಸಿದರು. ಎರಡೂ ಪ್ರಯೋಗಗಳಲ್ಲಿ ಅವರಿಗೆ ಗೆಲುವು ಸಿಕ್ಕಿತು. ಇದೀಗ ಸುಕುಮಾರ್ ಶೈಲಿಯ ಜನಪ್ರಿಯತೆ ಅವರಿಗೆ ಹಿಡಿಸಿರುವುದರಲ್ಲಿ ಅಚ್ಚರಿಯೇನೂ ಅಲ್ಲ.

ಹಿಂದಿ ಚಿತ್ರರಂಗದ ತಾರಾನಟರು ದಕ್ಷಿಣ ಭಾರತದ ನಿರ್ದೇಶಕರಿಗೆ ಚಿತ್ರವೀಳ್ಯ ಕೊಡುವ ಪರಿಪಾಟ ಹೊಸತೇನಲ್ಲ. ಸಲ್ಮಾನ್ ಖಾನ್, ಪ್ರಭುದೇವ ಅವರನ್ನು ಕರೆಸಿ, ವಾಂಟೆಡ್ ರಿಮೇಕ್ ಸಿನಿಮಾ ಮಾಡಿ ಗೆದ್ದಿದ್ದರು. ಅವರೀಗ ಎ.ಆರ್. ಮುರುಗದಾಸ್ ಅವರಿಂದ 'ಸಿಕಂದರ್' ಚಿತ್ರವನ್ನು ನಿರ್ದೇಶನ ಮಾಡಿಸಿದ್ದಾರೆ. ಶಾರುಕ್ ಅವರೂ ಅದೇ ಹಾದಿಯಲ್ಲಿ ಇರುವುದು ಸ್ಪಷ್ಟ. ■

# ತಮಿಳಿನಲ್ಲಿ ರುಕ್ಮಿಣಿ ಖಾತೆ

ಕನ್ನಡದ ನಟಿ ರುಕ್ಮಿಣಿ ವಸಂತ ಅಭಿನಯದ ಮೊದಲ ತಮಿಳು ಚಿತ್ರದ ಒಂದು ಹಾಡು ಇತ್ತೀಚೆಗೆ ಬಿಡುಗಡೆಯಾಯಿತು. ವಿಜಯ್ ಸೇತುಪತಿ ಜೊತೆಗಿನ ರೊಮ್ಯಾಂಟಿಕ್ ಹಾಡನ್ನು ವೀಕ್ಷಕರು ಮೆಚ್ಚಿಕೊಂಡಿದ್ದಾರೆ. ಆರ್ಮುಗ ಕುಮಾರ್ ನಿರ್ದೇಶನದ 'ಏಸ್' ಹೆಸರಿನ ಚಿತ್ರದ ಹಾಡು ಇದು.

ಸಿನಿಮಾದ ಬಹುಪಾಲು ಚಿತ್ರೀಕರಣ ಮಲೇಷ್ಯಾದಲ್ಲಿ ನಡೆಯಿತು. ಮಲೇಷ್ಯಾದಲ್ಲಿ ನೆಲಸಿದ ತಮಿಳು ಯುವತಿಯ ಪಾತ್ರದಲ್ಲಿ ರುಕ್ಮಿಣಿ ಅಭಿನಯಿಸಿದ್ದಾರೆ. ಅವರ ಪಾತ್ರವೇ ಚಿತ್ರದ ಆತ್ಮ ಎಂದು ನಿರ್ದೇಶಕರು ಹೇಳಿದ್ದರು.

2018ರಲ್ಲಿ ನಿರ್ದೇಶಕ ಆರ್ಮುಗ ಕುಮಾರ್ ಅವರು 'ಒರು ನಲ್ಲ ನಾಲ್ ಪಾಟು ಸೊಲ್ರೇನ್' ತಮಿಳು ಚಿತ್ರವನ್ನು ತಯಾರಿಸಿದ್ದರು. ಬ್ಲ್ಯಾಕ್ ಕಾಮಿಡಿಯ ಈ ಸಿನಿಮಾ ವಿಜಯ್ ಸೇತುಪತಿ ಅವರಿಗೆ ದೊಡ್ಡ ಗೆಲುವನ್ನು ತಂದುಕೊಟ್ಟಿತ್ತು. 2021ರಲ್ಲಿ 'ಲಾಭಂ' ಎಂಬ ಇನ್ನೊಂದು ತಮಿಳು ಚಿತ್ರವನ್ನೂ ಅವರು ನಿರ್ದೇಶಿಸಿದ್ದರು. ಅದರಲ್ಲೂ ಕೇಂದ್ರ ಪಾತ್ರದಲ್ಲಿ ವಿಜಯ್ ಸೇತುಪತಿ ಅಭಿನಯಿಸಿದ್ದರು. ರೈತ ಸಮುದಾಯ ಹಾಗೂ ಉದ್ಯಮಿಯೊಬ್ಬನ ನಡುವಿನ ಹೋರಾಟ ಕಥನದ ಚಿತ್ರ ಅದಾಗಿತ್ತು. 'ಏಸ್' ಚಿತ್ರದ ಸಾರಾಂಶವನ್ನು ನಿರ್ದೇಶಕರು ಈಗಲೂ ಗುಟ್ಟಾಗಿಯೇ ಇಟ್ಟಿದ್ದಾರೆ.

ಜಸ್ಟಿನ್ ಪ್ರಭಾಕರನ್ ಸ್ವರ ಸಂಯೋಜನೆ ಮಾಡಿರುವ ಮಧುರ ಹಾಡುಗಳು ಇರುವ 'ಏಸ್', ರುಕ್ಮಿಣಿ ವೃತ್ತಿಬದುಕಿಗೆ ತಿರುವು ದಕ್ಕಿಸಿಕೊಟ್ಟೀತೆ? ■

